# ವಿಜಯಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ: ಒಂದು ಅವಲೋಕನ

ವಿದ್ಯಾ ಎಸ್. ಹಡಗಲಿ

ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಣ್ಣಿಗೇರಿ.

DOI: https://doi.org/10.5281/zenodo.18116529

## ABSTRACT:

ವೈಭವಪೂರ್ಣ ಇತಿಹಾಸ ಹೊಂದಿರುವ ವಿಜಯಪುರದ ಹಿನ್ನೆಲೆ ಶಿಲಾಯುಗದಷ್ಟು ಹಿಂದಕ್ಕೆ ಹೋಗುತ್ತದೆ. ಪ್ರಾಚೀನ ಕಾಲದಿಂದಲೂ ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ವಿಜಯಪುರ ಬ್ರಿಟಿಷ್ ಆಡಳಿತದ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ಆದ ಸ್ವಾತಂತ್ರ್ಯ ಹೋರಾಟಗಾರರು, ಪತ್ರಕರ್ತರು, ಕಾರ್ಯಕರ್ತರು ಮತ್ತು ಸಾಮಾಜಿಕ ಸುಧಾರಕರನ್ನು ನೀಡಿದೆ. ಇಂತಹ ಐತಿಹಾಸಿಕ ಪ್ರಸಿದ್ಧ ವಿಜಯಪುರ ಜಿಲ್ಲೆಯಲ್ಲಿ ಜರುಗಿದ ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳನ್ನು ಸ್ಥೂಲವಾಗಿ ಅವಲೋಕಿಸುವುದೇ ಈ ಲೇಖನದ ಉದ್ದೇಶವಾಗಿದೆ.

## KEYWORDS:

ವಿಜಯಪುರ, ಬ್ರಿಟಿಷರು, ಸ್ವಾತಂತ್ರ್ಯ ಹೋರಾಟ, ಚಳುವಳಿಗಳು, ಹೋರಾಟಗಾರರು.

**ಪೀಠಿಕೆ:**

ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸಾಗಿ ಬಂದ ಸ್ವಾತಂತ್ರ್ಯ ಹೋರಾಟ ತನ್ನದೇ ಆದ ಮಹತ್ವವನ್ನು ಹೊಂದಿದೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಯ ನಾಯಕರು ವಿಜಯಪುರ ಜಿಲ್ಲೆಗೆ ಭೇಟಿ ನೀಡಿ ಜನರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಈ ಲೇಖನದಲ್ಲಿ ಕ್ರಿ.ಶ. 1857ಕ್ಕಿಂತ ಮುಂಚೆ ಹಾಗೂ ಕ್ರಿ.ಶ. 1885ರ ನಂತರದ ಚಳುವಳಿಗಳು ಎಂದು ಎರಡು ಭಾಗವಾಗಿ ವಿಂಗಡಿಸಿ ಚರ್ಚಿಸಲಾಗಿದೆ.

ಬಾದಾಮಿ ಚಾಲುಕ್ಯರಿಂದ ದೇವಗಿರಿಯ ಯಾದವರ ಆಡಳಿತಕ್ಕೆ ಒಳಪಟ್ಟ ವಿಜಯಪುರ ಮುಂದೆ ಬಹಮನಿ ಸುಲ್ತಾನರ ಪ್ರಮುಖ ತರಫ್ (ಪ್ರಾಂತ) ಆಗಿತ್ತು. ಮುಂದೆ ಕ್ರಿ.ಶ. 1489ರಿಂದ 1686ರ ವರೆಗೆ ಆದಿಲ್‌ಶಾಹಿಗಳ ರಾಜಧಾನಿಯಾಗಿ ವಿಜೃಂಭಿಸಿತು. ಅನಂತರ ಮೊಘಲ ಬಾದಶಹ, ಹೈದ್ರಾಬಾದಿನ ನಿಜಾಮ, ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. 1818ರ 3ನೆಯ ಆಂಗ್ಲೋ ಮರಾಠ ಯುದ್ಧದ ನಂತರ ವಿಜಯಪುರ ಪೂರ್ಣವಾಗಿ ಬ್ರಿಟಿಷ ಅಧೀನಕ್ಕೆ ಬಂದಿತು. ಈ ಪ್ರದೇಶ ಮೊದಲು ಸೋಲಾಪುರ ಕಲೆಕ್ಟರೇಟ್, ತದನಂತರ ಧಾರವಾಡ ಕಲೆಕ್ಟರೇಟ್‌ಗೆ ವರ್ಗಾವಣೆಗೊಂಡಿತು. ದಕ್ಷಿಣ ಭಾರತದ ಕಂದಾಯ ಅಧಿಕಾರಿಯಾಗಿ ಬಂದ ಎ. ಹರ್ಥನ ಸಲಹೆಯಂತೆ ಆಡಳಿತದ ಅನುಕೂಲಕ್ಕಾಗಿ ಕ್ರಿ.ಶ. 1864ರಿಂದ 1884ರವರೆಗೆ ಈ ಪ್ರದೇಶವನ್ನು ಕಲಾದಗಿ ಎಂಬ ನೂತನ ಜಿಲ್ಲೆಗೆ ಸೇರಿಸಲಾಗಿತ್ತು.

ಆದಿಲ್‌ಶಾಹಿಗಳಿಂದ ನಿರ್ಮಿತ ಬೃಹತ್ ಕಟ್ಟಡಗಳ ಸಮರ್ಪಕ ಬಳಕೆ ಮತ್ತು ಬ್ರಿಟಿಷ್ ಆಡಳಿತದ ಅನುಕೂಲಕ್ಕಾಗಿ ಕ್ರಿ.ಶ. 1885ರಲ್ಲಿ ಕಲಾದಗಿ ಜಿಲ್ಲಾ ಕೇಂದ್ರವನ್ನು ವಿಜಯಪುರಕ್ಕೆ ವರ್ಗಾಯಿಸಲಾಯಿತು. ಪಂಚನದಿಗಳ ಬೀಡಾದ ವಿಜಯಪುರ ಜಿಲ್ಲೆಯನ್ನು ಕ್ರಿ.ಶ. 1997ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಶ್ರೀ ಜೆ. ಹೆಚ್. ಪಟೇಲರ ನೇತೃತ್ವದ ರಾಜ್ಯ ಸರ್ಕಾರ ವಿಜಯಪುರದ ದಕ್ಷಿಣ ಭಾಗವನ್ನು ಬಾಗಲಕೋಟೆ ಜಿಲ್ಲೆ ಎಂದು ವಿಭಜಿಸಿದಾಗ ವಿಜಯಪುರ ಜಿಲ್ಲೆ ಐದು ತಾಲೂಕುಗಳಿಗೆ ಸೀಮಿತವಾಯಿತು. ಮುಂದೆ 2017ರಲ್ಲಿ ಶ್ರೀಯುತ ಜಗದೀಶ ಶೆಟ್ಟರ್ ಅವರ ನೇತೃತ್ವದ ರಾಜ್ಯ ಸರ್ಕಾರ ತಾಲೂಕುಗಳನ್ನು ಪುನರ್ ವಿಂಗಡಣೆ ಮಾಡಿರುವುದರಿಂದ ಇಂದು ಒಟ್ಟು 13 ತಾಲೂಕುಗಳನ್ನು ವಿಜಯಪುರ ಜಿಲ್ಲೆ ಒಳಗೊಂಡಿದೆ.

**ವಿಜಯಪುರ ಪರಿಸರದಲ್ಲಿ ನಡೆದ ಕ್ರಿ.ಶ. 1857ಕ್ಕಿಂತ ಮುಂಚಿನ ಚಳುವಳಿಗಳು:**

**ಸಿಂದಗಿ ಬಂಡಾಯ:** ಕ್ರಿ.ಶ. 1824ರಲ್ಲಿ ವಿಜಯಪುರದ ಸಿಂದಗಿಯಲ್ಲಿ ಜರುಗಿದ ಬಂಡಾಯ ಬ್ರಿಟಿಷರ ವಿರುದ್ಧದ ವಿಜಯಪುರ ಜಿಲ್ಲೆಯ ಪ್ರಥಮ ಬಂಡಾಯವಾಗಿದೆ. ವಿಜಯಪುರದಿಂದ 40 ಮೈಲು ದೂರ ಇರುವ ಸಿಂದಗಿಯ ದಿವಾಕರ ದೀಕ್ಷಿತ, ಚಿದಂಬರ ದೀಕ್ಷಿತ, ರಾವಜಿ ರಸ್ತಿ ಬಾಳಪ್ಪ ದೇಶಪಾಂಡೆ, ತುಕ್ಕಲಿಯ ಸೆಟ್ಟಿಯಪ್ಪ ಇವರ ನೇತೃತ್ವದಲ್ಲಿ ಸಿಂದಗಿಯನ್ನು ಬ್ರಿಟಿಷರ ಅಧೀನದಿಂದ ಕಿತ್ತುಕೊಂಡು ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ನಾಶವಾಗಿದೆ ಎಂದು ಹೇಳಿ ಬ್ರಿಟಿಷರ ವಿರುದ್ಧ ಕಂದಾಯವನ್ನು ತಾವೇ ವಸೂಲಿ ಮಾಡಿದರೆ, ಅಮೃತ ರಾವ್, ವಿನಾಯಕರಾವ್, ಮಾಧವನಾಯಕ ರಾಷ್ಟ್ರಧ್ವಜವನ್ನು ಹಾರಿಸಿದರು. ಆದರೆ, ಅಣ್ಣಪ್ಪ ಪತಕಿ ಎಂಬ ದೇಶದ್ರೋಹಿಯಿಂದ ಈ ಬಂಡಾಯ ವಿಫಲವಾಯಿತು. ಧಾರವಾಡದ ಕಲೆಕ್ಟರ್ ಸ್ಟೀವನ್‌ಸನ್ ಸೈನ್ಯವನ್ನು ರವಾನಿಸಿ ಸಿಂದಗಿಯ ಬಂಡಾಯವನ್ನು ಹತ್ತಿಕ್ಕಿದನು.

**ಬಾದಾಮಿ ಬಂಡಾಯ:** ಕ್ರಿ.ಶ. 1839ರಲ್ಲಿ ಸತಾರಾದ ರಾಜಾ ಪ್ರತಾಪಸಿಂಗ ಬ್ರಿಟಿಷರಿಂದ ಸಿಂಹಾಸನದಿಂದ ಕೆಳಗಿಳಿಸಲ್ಪಟ್ಟಾಗ ಬ್ರಿಟಿಷರ ವಿರುದ್ಧ ತನ್ನ ಜನರನ್ನು ಸೇರಿಸುವಲ್ಲಿ ಯಶಸ್ವಿಯಾದನು. ಅವನ ಅನುಯಾಯಿಗಳಲ್ಲಿ ನರಸಪ್ಪ ಪಟೇಕಾರನೂ ಒಬ್ಬನು. ನರಸಪ್ಪನ ತಂದೆ ಸತಾರಾ ಪ್ರಾಂತದಲ್ಲಿ ಅಧಿಕಾರಿಯಾಗಿದ್ದನು. ನರಸಪ್ಪ ಗುಪ್ತವಾಗಿ ಪೂನಾ, ನಾಸಿಕ, ಅಹಮದನಗರ, ರಾಯಚೂರು ಮತ್ತು ಸುರಪುರಗಳಿಗೆ ಭೇಟಿಕೊಟ್ಟು ಜನರನ್ನು ಸಂಘಟಿಸಿದನು. ಬ್ರಿಟಿಷರ ಅಧೀನದಲ್ಲಿದ್ದ ಬಾದಾಮಿಯನ್ನು ಪ್ರವೇಶಿಸಿ, ಅಲ್ಲಿಯ ಸಂಪತ್ತನ್ನು ವಶಪಡಿಸಿಕೊಂಡನು. ಧಾರವಾಡ ಮತ್ತು ಬೆಳಗಾವಿಯಿಂದ ಆಗಮಿಸಿದ ಬ್ರಿಟಿಷ್ ಸೈನ್ಯಕ್ಕೂ ಇವರಿಗೂ ಯುದ್ಧ ನಡೆದು ನರಸಪ್ಪ ಸೋತನು.

**ಹಲಗಲಿ ಬೇಡರ ಬಂಡಾಯ:** ವಿಜಯಪುರ ಜಿಲ್ಲೆಯ ಮುಧೋಳ ಸಂಸ್ಥಾನದಲ್ಲಿ ಬರುವ ಒಂದು ಹಳ್ಳಿ ಹಲಗಲಿ. ಬೇಡ ಜನಾಂಗದವರೇ ಅಲ್ಲಿಯ ಮುಖ್ಯ ನಿವಾಸಿಗಳು. ಕ್ರಿ.ಶ. 1857ರಲ್ಲಿ ಲೆಫ್ಟಿನೆಂಟ್ ಕರ್ನಲ್ ಜೆ.ಬಿ.ಎಸ್. ಈಟನ್ ಕೇರ್ ಒಂದು ಆದೇಶವನ್ನು ಹೊರಡಿಸಿದನು. ಆ ಆದೇಶದ ಪ್ರಕಾರ ಬೇಡರು

ಬ್ರಿಟಿಷರ ಅನುಮತಿ ಇಲ್ಲದೇ ಆಯುಧಗಳನ್ನು ಹೊಂದುವಂತಿರಲಿಲ್ಲ. ಈಗಾಗಲೇ ಹೊಂದಿದ್ದರೆ ಅಂಥ ಆಯುಧಗಳನ್ನು ಬ್ರಿಟಿಷರಿಗೆ ಒಪ್ಪಿಸಬೇಕು ಅಥವಾ ಸರ್ಕಾರಿ ದಾಖಲೆಗಳಲ್ಲಿ ಅವುಗಳನ್ನು ನಮೂದಿಸಬೇಕೆಂದು ಮತ್ತು ಯಾರ ಹತ್ತಿರ ಆಯುಧಗಳ ಪರವಾನಿಗೆ ಇಲ್ಲವೋ ಅವರಿಗೆ ಆಯುಧಗಳನ್ನು ಮರಳಿ ಕೊಡುವುದಿಲ್ಲವೆಂಬುದೇ ಆ ಆದೇಶವಾಗಿತ್ತು. ಹಲಗಲಿಯ ಬೇಡರು ಈ ಆದೇಶವನ್ನು ಒಪ್ಪಿಕೊಳ್ಳಲಿಲ್ಲ. ಮುಧೋಳದ ಬ್ರಿಟಿಷ್ ಅಧೀನ ಅಧಿಕಾರಿಗಳು ಮತ್ತು ಗುಮಾಸ್ತರು ಹಲಗಲಿಯ ಬೇಡರಿಗೆ ಈ ಆದೇಶದ ಕುರಿತು ಸಾಕಷ್ಟು ಬಾರಿ ತಿಳಿಸಿ ಹೇಳುವ ಪ್ರಯತ್ನ ಮಾಡಿದರೂ ಆಯುಧಗಳು ಅವರ ಬದುಕು ಮತ್ತು ಗೌರವ ಎಂಬುದು ಹಲಗಲಿಯ ಬೇಡರ ಅನಿಸಿಕೆಯವಾಗಿತ್ತು. ಹೀಗಾಗಿ ಬ್ರಿಟಿಷರ ಆದೇಶವನ್ನು ಧಿಕ್ಕರಿಸಿದರು. ಇವರ ಈ ನಡೆಗೆ ಬೂದ್ನಿ, ಮಂಟೂರು ಮತ್ತು ಅಳಗುಂಡಿಯ ಬೇಡರೂ ಜೊತೆಯಾದರು. ಕೊನೆಗೆ ಕ್ರಿ.ಶ. 1857ರ ನವೆಂಬರ್ ತಿಂಗಳಿನಲ್ಲಿ ಲೆಫ್ಟಿನೆಂಟ್ ಕರ್ನಲ್ ಈಟನ್ ಕೇರ್ ಅಶ್ವದಳದೊಂದಿಗೆ ಹಲಗಲಿಗೆ ಬಂದು ಬೇಡರಿಗೆ ಶರಣಾಗಲು ಸೂಚಿಸಿದನು. ಬೇಡರು ಈಟನ್ ಮೇಲೆ ದಾಳಿ ಮಾಡಿದರು. ರಾತ್ರಿಯಿಡೀ ಗುಂಡಿನ ಚಕಮಕಿಯಾಯಿತು. ಬೆಳಿಗ್ಗೆ ಬಾಗಲಕೋಟೆಯಿಂದ ಮತ್ತಷ್ಟು ಸೈನ್ಯ ಬಂದು ಸೇರಿತು. ಆದರೂ ಬೇಡರು ಅತ್ಯಂತ ವೀರಾವೇಶದಿಂದ ಬ್ರಿಟಿಷರ ವಿರುದ್ಧ ಹೋರಾಡಿದರು. ಆಗ ಕೆಲವು ಬೇಡರು ಅವಿತುಕೊಂಡರೆ, ಕೆಲವರು ಓಡಿ ಹೋದರು. ಈಟನ್ ಇಟ್ಟ ಬೆಂಕಿ ಇಡೀ ಹಲಗಲಿ ಗ್ರಾಮವನ್ನು ಸುಟ್ಟು ಬೂದಿ ಮಾಡಿತು. ಸೆರೆಸಿಕ್ಕ ಬೇಡರಲ್ಲಿ ಕೆಲವರನ್ನು ನೇಣಿಗೇರಿಸಲಾಯಿತು. ಹೀಗೆ ಹಲಗಲಿಯ ಬೇಡರು ತಮ್ಮ ಶೌರ್ಯಕ್ಕಾಗಿ ದಂತಕಥೆಯಾದರು.

**ಜಂಬಗಿಯ ಬಂಡಾಯ:** ಚಾಂದಕವಟೆ ಮತ್ತು ಸಿರಸೆಟ್ಟಿಯ ಈ ಹಿಂದಿನ ದೇಶಮುಖನಾಗಿದ್ದ ಬಸಲಿಂಗಪ್ಪ, ಸುರಪುರದ ವೆಂಕಟಪ್ಪ ನಾಯಕನೊಂದಿಗೆ ಸೇರಿಕೊಂಡು ಕೊಪ್ಪಳದ ಕೋಟೆಯಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿ, ಬ್ರಿಟಿಷರ ವಿರುದ್ಧ ಬಂಡಾಯ ಏಳುವ ಸೂಚನೆ ಬಂಡಾಯಕ್ಕಿಂತ ಮುಂಚೆಯೇ ಬ್ರಿಟಿಷರಿಗೆ ದೊರೆತಿದ್ದರಿಂದ, ಬ್ರಿಟಿಷರ ಸೈನ್ಯ ಜಂಬಗಿಯ ಅವರ ಮನೆ ಮತ್ತು ಕೊಪ್ಪಳದ ಕೋಟೆಯನ್ನು ಶೋಧಿಸಿ ಅಲ್ಲಿದ್ದ ಮದ್ದುಗುಂಡುಗಳನ್ನು ವಶಪಡಿಸಿಕೊಂಡು, ಬಸಲಿಂಗಪ್ಪ ಮತ್ತು ಆತನ ಮಗನನ್ನು ಹಾಗೂ ಅವರ ಬಂಡಾಯಕ್ಕೆ ಸಹಕರಿಸಿದ ಅನೇಕ ಜನರನ್ನು ಬಂಧಿಸಿತು. ಬಸಲಿಂಗಪ್ಪನ ಇತರೇ ಆಸ್ತಿಯನ್ನು ಬ್ರಿಟಿಷರು ಮುಟ್ಟುಗೋಲು ಹಾಕಿಕೊಂಡರು.

ಈ ಬಂಡಾಯಕ್ಕೆ ಜಮಖಂಡಿಯ ರಾಜನ ಪ್ರೋತ್ಸಾಹದ ಸಂಶಯದ ಮೇಲೆ ರಾಜನನ್ನು ಬಂಧಿಸಲಾಯಿತು. ಆದರೆ ಚನ್ನುಸಿಂಗ ಎಂಬುವವ ಈ ಬಂಡಾಯದ ಹೊಣೆ ಹೊತ್ತಿದ್ದಕ್ಕಾಗಿ ಜಮಖಂಡಿಯ ಅರಸನನ್ನು ಬಿಡುಗಡೆ ಗೊಳಿಸಿ, ಚನ್ನುಸಿಂಗನನ್ನು ಗಲ್ಲಿಗೇರಿಸಲಾಯಿತು. ಈ ಉಪಕಾರ ಸ್ಮರಣೆಗಾಗಿ ಈಗಲೂ ಜಮಖಂಡಿಯ ರಾಜಪರಿವಾರದವರು ಚನ್ನುಸಿಂಗನ ಸಮಾಧಿಗೆ ಪೂಜೆ ಸಲ್ಲಿಸಿ ದರ್ಶನ ಪಡೆಯುತ್ತಾರೆ.

## ಕ್ರಿ.ಶ. 1885ರ ನಂತರದ ಸ್ವಾತಂತ್ರ್ಯ ಚಳುವಳಿಗಳು

**ಸ್ವದೇಶಿ ಮತ್ತು ಸ್ವರಾಜ್ಯ ಚಳುವಳಿ:** ಈ ಭಾಗದಲ್ಲಿ ಸ್ವದೇಶಿ ಚಳುವಳಿಯು ಆರಂಭದಲ್ಲಿ ಸೌಮ್ಯ ಸ್ವರೂಪದಲ್ಲಿ ಇದ್ದದ್ದು. ಈ ಭಾಗಕ್ಕೆ ರಾಷ್ಟ್ರೀಯ ನಾಯಕರು ಭೇಟಿ ನೀಡಿ ಸ್ವಾತಂತ್ರ್ಯ ಚಳುವಳಿ ಕುರಿತು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಗಿನಿಂದ ಈ ಭಾಗದ ಜನ ಇನ್ನೂ ಹೆಚ್ಚು ಜಾಗೃತರಾದರು. ಈ ಸಂದರ್ಭದಲ್ಲಿ ಸ್ವದೇಶಿ ಚಳುವಳಿ ಈ ಭಾಗದಲ್ಲಿ ತೀವ್ರವಾಯಿತು.

ವಿಜಯಪುರ ಪರಿಸರದ ಜನರು ಉನ್ನತ ಶಿಕ್ಷಣಕ್ಕೆ ಪೂನಾಕ್ಕೆ ಹೋಗಬೇಕಾಗುತ್ತಿದ್ದರಿಂದ, ಹಾಗೆ ಹೋದ ಶ್ರೀನಿವಾಸರಾವ್ ಕೌಜಲಗಿ, ಹನುಮಂತರಾವ್ ಕೌಜಲಗಿ, ಹನುಮಂತರಾವ್ ಮೊಹರೆ ಇವರು ರಾಷ್ಟ್ರೀಯ ನಾಯಕರುಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಸಾಧ್ಯವಾಯಿತು. ಆ ಹುರುಪು ಈ ಭಾಗದ ಜನರಿಗೆ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಯಿತು.

ಮಾತೃಪ್ರೇಮದ ಸಂಕೇತವಾಗಿ ಈ ಭಾಗದ ಜನರೂ ಸ್ವದೇಶಿ ಚಳುವಳಿಯ ಭಾಗವಾಗಿ ಸ್ವದೇಶಿ ವಸ್ತುಗಳನ್ನು ಉಪಯೋಗಿಸುವುದು ಮತ್ತು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು. ರಾಷ್ಟ್ರೀಯ ಶಿಕ್ಷಣ ಮತ್ತು ಸ್ವಯಂ ಆಡಳಿತ ಹೊಂದುವುದು ಇವು ಸ್ವದೇಶಿ ಆಂದೋಲನದ ಮುಖ್ಯ ಅಂಶಗಳಾಗಿದ್ದವು. ಈ ಭಾಗದಲ್ಲಿ ಶ್ರೀನಿವಾಸರಾವ್ ಕೌಜಲಗಿಯವರು ಈ ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡಿದ್ದರು. ಇವರ ಜೊತೆಗೆ ವಿಜಯಪುರದಲ್ಲಿ ಗಣಪತಚಂದ ಶಹ, ಎಮ್. ಎನ್. ಶಹ, ಹೀರಾಲಾಲ ಶಹ, ಇಂಡಿ ಭಾಗದಲ್ಲಿ ಸುರಪುರ ಮಲ್ಲಪ್ಪ, ಜೀವರಾಜ ಜೋಶಿ, ತಾಳಿಕೋಟೆಯಲ್ಲಿ ಶಿವಬಸವ ಪಟ್ಟದೇವರು, ಬಾಗೇವಾಡಿಯಲ್ಲಿ ವೆಂಕಟರಾವ ನರಗುಂದ, ಮುದ್ದೇಬಿಹಾಳದಲ್ಲಿ ಮೋಟಗಿ ಎಂಬ ವರ್ತಕರು ಈ ಚಳುವಳಿಯಲ್ಲಿ ಭಾಗವಹಿಸಿದ್ದಲ್ಲದೇ ಚಳುವಳಿ ವಿಶಾಲವಾಗಿ ಹರಡಲು ಕಾರಣೀಕರ್ತರಾದರು.

ಜಮಖಂಡಿ ಭಾಗದಲ್ಲಿ 'ಮುಷ್ಠಿಹಣ' ಎನ್ನುವ ಹೆಸರಿನಲ್ಲಿ ಹಣ ಸಂಗ್ರಹಿಸಿ ನೊಂದ ಬಂಗಾಳದ ಜನತೆಗೆ ಕಳುಹಿಸಲಾಯಿತು. ವಿಜಯಪುರ ಮೊದಲ್ಗೊಂಡು ಕರ್ನಾಟಕದ ಹಲವಾರು ಭಾಗಗಳಲ್ಲಿ ವಿದೇಶಿ ಬಟ್ಟೆಗಳನ್ನು ಸುಡಲಾಯಿತು. ಕರ್ನಾಟಕದ ಹಲವಾರು ಪತ್ರಿಕೆಗಳ ಜೊತೆ ವಿಜಯಪುರ ಭಾಗದ 'ಕರ್ನಾಟಕ ವೈಭವ' ಮತ್ತು 'ಉದಯ' ಪತ್ರಿಕೆಗಳನ್ನು ಬ್ರಿಟಿಷರು ಮುಟ್ಟುಗೋಲು ಹಾಕಿಕೊಂಡರು. ಸ್ವಾತಂತ್ರ್ಯ ಚಳುವಳಿಯ ಉದ್ದೇಶದಿಂದಲೇ ವಿಜಯಪುರದಲ್ಲಿ ಫ.ಗು. ಹಳಕಟ್ಟಿಯವರಿಂದ 'ನವ ಕರ್ನಾಟಕ' ಎಂಬ ಪತ್ರಿಕೆ ಪ್ರಾರಂಭಿಸಲ್ಪಟ್ಟಿತು.

ಕ್ರಿ.ಶ.1921ರಲ್ಲಿ ಬಾಗೇವಾಡಿ ತಾಲೂಕಿನ ಮಸಬಿನಾಳ ಗ್ರಾಮದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಹರ್ಡೇಕರ ಮಂಜಪ್ಪ ಹಾಗೂ ಕೌಜಲಗಿಯ ಹನುಮಂತರಾಯರು ವಿದೇಶಿ ಬಟ್ಟೆ, ಚಹ ಮತ್ತು ಕಾಫಿಗಳನ್ನು ತಿರಸ್ಕರಿಸಲು ಕರೆ ನೀಡಿದರು. ರಾಷ್ಟ್ರೀಯ ಶಿಕ್ಷಣದ ಉದ್ದೇಶದಿಂದ ವಿಜಯಪುರದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಶಾಲೆಗೆ ರಾಮದಾಸ ದರ್ಬಾರ ಅವರು ತಮ್ಮ ಸ್ವಂತ ಕಟ್ಟಡವನ್ನು ಬಿಟ್ಟು ಕೊಟ್ಟಿದ್ದರು. ಈ

ಶಾಲೆಯಲ್ಲಿ ಹನುಮಂತರಾವ್ ಕೋಣ್ಣೂರ ಮತ್ತು ಮೊಹರೆ ಹನುಮಂತರಾಯರು ಕೆಲವು ದಿನಗಳ ಕಾಲ ಶಿಕ್ಷಕರಾಗಿ ಸೇವೆಗೈದಿದ್ದಾರೆ. ಕ್ರಿ.ಶ. 1908 ಜೂನ್ 24ರಂದು ತಿಲಕರ ಬಂಧನವಾದಾಗ ವಿಜಯಪುರದಲ್ಲಿ ಶಾಲಾ ಶಿಕ್ಷಕರಾಗಿದ್ದ ಭೀಮಾಚಾರ್ಯ ಚಿಮ್ಮಲಗಿಯವರು ತಿಲಕರ ಭಾವಚಿತ್ರವನ್ನು ಶಾಲೆಯಲ್ಲಿ ಪ್ರದರ್ಶಿಸಿ ಸರ್ಕಾರದ ನಿಬಂಧಕ್ಕೆ ಗುರಿಯಾಗಿ ನೌಕರಿ ಕಳೆದುಕೊಂಡರು.

ಇವರಲ್ಲದೇ ಹುನಗುಂದದ ಬಸಟ್ಟೆಪ್ಪ ಬಳುಟಗಿ, ಇಲಕಲ್‌ನ ಕವಿಸೆಟ್ಟಿ, ಜಂಪಣ್ಣ ಜಿತೂರಿ ಗುಡೂರಿನ ದಲಬಂಜನ ಮತ್ತು ಹುಚ್ಚಪ್ಪ ಲೆಕ್ಕದ, ಬಾಗಲಕೋಟೆಯ ಕಂಠಿ, ಬೀಳಗಿಯ ಪಂಚಗಟ್ಟಿ, ಮಹದೇವಪ್ಪ ಕಟ್ಟಿ, ಗುಳೇದಗುಡ್ಡದ ಸಿದ್ರಾಮಪ್ಪ ತಿಪ್ಪಾ, ಪಟ್ಟಣಶೆಟ್ಟಿ ವೀರಭದ್ರಪ್ಪ ಮಿಠಾಯಿ, ದೇವಾಂಗ ನಿಜಪ್ಪ, ಚೊಳಚಗುಡ್ಡದ ಮಹಾರುದ್ರಪ್ಪ ಪಟ್ಟಣಶೆಟ್ಟಿ, ಸಿದ್ದಪ್ಪ ಮಾಳವಾಡ ಇವರೆಲ್ಲರೂ ಈ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ ಯಶಸ್ವಿಯಾಗಲು ಕಾರಣೀಕರ್ತರಾದವರು.

ಕ್ರಿ.ಶ. 1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಚಳುವಳಿಗಾರರು ಮಂದವಾದಿಗಳು ಮತ್ತು ತೀವ್ರವಾದಿಗಳು ಎಂದು ಇಬ್ಭಾಗವಾದರು. ಈ ಅಧಿವೇಶನದಲ್ಲಿ ಕರ್ನಾಟಕದ ಆಲೂರು ವೆಂಕಟರಾವ್, ಶ್ರೀನಿವಾಸರಾವ್ ಕೌಜಲಗಿ, ಅಣ್ಣಾಚಾರ ಹೊಸಕೇರಿ, ಭೀಮರಾವ್ ಬೇವೂರು, ಬಾಬುರಾವ್ ಗೋಣಿ ಮತ್ತು ಡಾ. ಎನ್. ಎಸ್. ಹರ್ಡೇಕರ ಅವರು ತೀವ್ರಗಾಮಿಗಳಾಗಿ ಗುರುತಿಸಿಕೊಂಡರು. ಕ್ರಿ.ಶ. 1919ರಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮಿಸಿ, ಭಾರತದ ರಾಷ್ಟ್ರೀಯ ಚಳುವಳಿಯೊಂದಿಗೆ ಗುರುತಿಸಿಕೊಂಡಾಗ ಅವರ ಪ್ರಭಾವದಿಂದ ಕರ್ನಾಟಕವೂ ಹೊಸ ತಿರುವು ಪಡೆಯಿತು.

**ಕರ್ನಾಟಕಕ್ಕೆ ಗಾಂಧೀಜಿಯವರ ಭೇಟಿ**

ಮಹಾತ್ಮಾ ಗಾಂಧೀಜಿಯವರು ವಿಜಯಪುರ ಜಿಲ್ಲೆಗೆ ನಾಲ್ಕು ಬಾರಿ ಭೇಟಿ ನೀಡಿದ್ದರು. ಕ್ರಿ.ಶ. 1918ರ ಮೇ 5 ಮತ್ತು 6 ರಂದು ವಿಜಯಪುರಕ್ಕೆ ಆಗಮಿಸಿದ ಗಾಂಧೀಜಿಯವರು ಬಾಲಗಂಗಾಧರ ತಿಲಕ, ಸರ್ದಾರ ವಲ್ಲಭಬಾಯಿ ಪಟೇಲರ ಸಹೋದರರಾದ ವಿಠ್ಠಲಬಾಯಿ ಪಟೇಲ, ಸರೋಜಿನಿ ನಾಯ್ಡು ಅವರ ಮಗಳು ಪದ್ಮಜಾ, ಸಿ. ರಾಜಗೋಪಾಲಚಾರ್ಯ, ವಿ. ಆರ್. ಸಿಂಧೆ ಇವರ ಜೊತೆಗೂಡಿ ಮುಂಬೈ ಪ್ರಾಂತ್ಯ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಈ ಪರಿಷತ್ತಿನಲ್ಲಿ ಕರ್ನಾಟಕದ ನಾಯಕರಾದ ನರಸಿಂಹ ಚಿಂತಾಮಣಿ ಕೇಳಕರ, ಶಿವರಾಮ ಮಹಾದೇವ ಪರಾಂಜಪೆಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರೆಲ್ಲರೂ ತಮ್ಮ ಭಾಷಣಗಳಿಂದ ಈ ಭಾಗದ ಜನರಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣರಾದರು. ಗಾಂಧೀಜಿಯವರಲ್ಲದೇ ಇನ್ನು ಅನೇಕ ರಾಷ್ಟ್ರೀಯ ನೇತಾರರಾದ ಸಿ. ಆರ್. ದಾಸ್, ಲಾಲಾ ಲಜಪತರಾಯ, ಆಚಾರ್ಯ ಕೃಪಲಾನಿ, ಕೆ. ಎಮ್. ಮುನ್ಸಿ, ಜವಾಹರಲಾಲ ನೆಹರು, ಶೌಕತ ಅಲಿ, ಮೊಹಮ್ಮದ ಅಲಿ ಮುಂತಾದವರು ವಿಜಯಪುರ ಜಿಲ್ಲೆಯ ಇಲಕಲ್, ಗುಳೇದಗುಡ್ಡ, ಮುದ್ದೇಬಿಹಾಳಗಳಿಗೆ ಭೇಟಿ ನೀಡಿ, ಜನರನ್ನು ರಾಷ್ಟ್ರೀಯ

ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿದರು.

ಕ್ರಿ.ಶ. 1921ರ ಮೇ 27 ಮತ್ತು 28ರಂದು ಎರಡು ದಿನಗಳ ಕಾಲ ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಗೈದ ಗಾಂಧೀಜಿ ತಿಲಕ ಸ್ವರಾಜ್ಯ ನಿಧಿ ಸಂಗ್ರಹಣೆಗಾಗಿ ಜನತೆಗೆ ಕರೆ ನೀಡುವುದರ ಜೊತೆಗೆ ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚು ಭಾಗವಹಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಾಜ್‌ಬಾವಡಿ ಮೈದಾನದಲ್ಲಿ ಸೇರಿದ್ದ ಸುಮಾರು 12 ಸಾವಿರ ಜನತೆಯನ್ನು ಉದ್ದೇಶಿಸಿ ಗಾಂಧೀಜಿ ಮಾತನಾಡಿದರು.

ಕ್ರಿ.ಶ. 1927ರ ಫೆಬ್ರುವರಿ 21ರಂದು ಮೂರನೆಯ ಬಾರಿಗೆ ಬಂದಂತಹ ಸಂದರ್ಭದಲ್ಲಿ ಸ್ವದೇಶಿ ಚಿಂತನೆಗಳ ಸಂದೇಶ ಸಾರಲು ಖಾದಿ ಪ್ರಚಾರ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಸಮೀಪದ ಕೋಲ್ಹಾರದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು. ಇದರಿಂದ ಪ್ರಭಾವಿತರಾದ ಕೋಲ್ಹಾರದ ಶಂಕರರಾವ್ ದೇಶಪಾಂಡೆಯವರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು.

ದೇಶವ್ಯಾಪಿ, ಅಸ್ಪೃಶ್ಯತಾ ನಿವಾರಣಾ ಯಾತ್ರೆ ಕೈಗೊಂಡ ಗಾಂಧೀಜಿ ಕ್ರಿ.ಶ. 1934ರ ಮಾರ್ಚ್ 8 ರಂದು ವಿಜಯಪುರ ಜಿಲ್ಲೆಯ ಹೊನವಾಡ, ತೊರವಿ ಗ್ರಾಮಗಳ ಹರಿಜನ ಕೇರಿಗಳಲ್ಲಿ ಭಾಷಣ ಮಾಡಿ ಅಸ್ಪೃಶ್ಯತೆ ಆಚರಣೆ ಮಹಾಪಾಪವಾಗಿದ್ದು ಅದನ್ನು ನಿರ್ಮೂಲನೆ ಮಾಡಲು ಎಲ್ಲರಿಗೂ ಕರೆ ನೀಡಿದರು. ವಿಜಯಪುರದ ಶಫರ್ಡ್ ಹಾಲಿನಲ್ಲಿ ಸೇರಿದ ನೂರಾರು ಜನ ನಾಯಕರಿಗೆ ಗಾಂಧೀಜಿ ಚಳುವಳಿಯ ರೂಪುರೇಷಗಳ ಕುರಿತು ಮಾರ್ಗದರ್ಶನ ನೀಡಿದರು. ಅದೇ ದಿನ ಛತ್ರ ಥಿಯೇಟರ್‌ನಲ್ಲಿ ಶಂಕರಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ಸೇರಿದ್ದ 800 ಜನ ಹರಿಜನ ಮತ್ತು ಸವರ್ಣೀಯರ ಕುರಿತು ಗಾಂಧೀಜಿ ಮಾತನಾಡಿದರು.

**ವಿಜಯಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಕಮೀಟಿ ಸ್ಥಾಪನೆ:** ವಿಜಯಪುರ ಜಿಲ್ಲೆಯಲ್ಲಿ ಕ್ರಿ.ಶ. 1915, ಜೂನ್ 22ರಂದು ವಿಜಯಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಕಮೀಟಿ ಸ್ಥಾಪನೆ ಆಯಿತು. ಪಾಂಡುರಂಗ ದೇಸಾಯಿಯವರು ಈ ಕಮೀಟಿಯ ಅಧ್ಯಕ್ಷರು. ನಾರಾಯಣ ವಿಠ್ಠಲದಾಸ ದರ್ಬಾರ ಅವರು ಉಪಾಧ್ಯಕ್ಷರು, ಮಾಧವ ಕೆಂಭಾವಿಯವರು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಇದರಲ್ಲಿ 31 ಜನ ಸದಸ್ಯರಿದ್ದರು. ಈ ಜಿಲ್ಲಾ ಕಾಂಗ್ರೆಸ್ ಕಮೀಟಿ ಅಡಿಯಲ್ಲಿ ಕ್ರಿ.ಶ. 1917ರಲ್ಲಿ ಬಾಗಲಕೋಟೆ ಮತ್ತು ಬೀಳಗಿಗಳಲ್ಲಿ ತಾಲೂಕಾ ಕಾಂಗ್ರೆಸ್ ಕಮೀಟಿಗಳು ರಚನೆಯಾದವು. 31–7–1938ರಲ್ಲಿ ಪ್ರಥಮಬಾರಿಗೆ ಮುಧೋಳದಲ್ಲಿ ರಾಷ್ಟ್ರೀಯ ಧ್ವಜಾರೋಹಣವನ್ನು ನೆರವೇರಿಸುವ ಮೂಲಕ ವಿಜಯಪುರ ಪರಿಸರದಲ್ಲಿ ಚಳುವಳಿ ಕಾವೇರಿಸುವಂಥ ಚಟುವಟಿಕೆಗಳು ನಡೆದವು. ಕ್ರಿ.ಶ. 1933ರ ನಂತರ ಚನ್ನಬಸಪ್ಪ ಅಂಬಲಿ, ಎಸ್. ಸಿ. ಮಿರ್ಜಿ, ರಾಜಾರಾಮ ದುಬೆ, ಮರುಳಾರಾಧ್ಯ ಶಾಸ್ತ್ರಿಯವರು ಕಾಂಗ್ರೆಸ್ ಕಮೀಟಿಯ ಮುಖಂಡರಾಗಿದ್ದು ವಿಜಯಪುರದಲ್ಲಿ ಚಳುವಳಿ ಬಿರುಸಿನಿಂದ ನಡೆದವು.

**ಹೋಂರೂಲ್ ಚಳುವಳಿ:** ಆ್ಯನಿಬೆಸೆಂಟ್ ಮತ್ತು ಬಾಲಗಂಗಾಧರ ತಿಲಕರು

ಆರಂಭಿಸಿದ್ದ ಹೋಂರೂಲ್ ಚಳುವಳಿ ವಿಜಯಪುರ ಪರಿಸರದಲ್ಲಿಯೂ ತನ್ನ ಪ್ರಭಾವ ಬೀರಿತು. ಕ್ರಿ.ಶ. 1918ರಲ್ಲಿ ಶ್ರೀನಿವಾಸರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ವಿಜಯಪುರ ಜಿಲ್ಲಾ ಹೋಂರೂಲ್ ಚಳುವಳಿ ಆರಂಭಿಸಲಾಯಿತು. ದಾಜೀರಾಮ್ ಚಂದ್ರ ಲಿಮಾಯೆ ಲೀಗ್‌ನ ಕಾರ್ಯದರ್ಶಿಗಳಾದರು. ವಿಜಯಪುರ ಪರಿಸರದ ವಿವಿಧ ಪ್ರದೇಶಗಳ 50 ಜನರು ಇದರ ಸದಸ್ಯರಾದರು. ಇದೇ ವರ್ಷ ಜುಲೈ 1ರಂದು ಮುದ್ದೇಬಿಹಾಳದಲ್ಲಿ ಹೋಂರೂಲ್ ಲೀಗ್ ಗ್ರಂಥಾಲಯವನ್ನು ತೆರೆಯಲಾಯಿತು. ರಾಷ್ಟ್ರೀಯ ಪತ್ರಿಕೆಗಳಾದ ಯಂಗ್ ಇಂಡಿಯಾ, ನ್ಯೂ ಇಂಡಿಯಾ ಮತ್ತು ಕೇಸರಿ ಪತ್ರಿಕೆಗಳನ್ನು ಈ ಗ್ರಂಥಾಲಯದಲ್ಲಿ ಇಡಲಾಯಿತು. ಇದರಿಂದಾಗಿ ಈ ಭಾಗದ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯತೊಡಗಿತು.

**ಅಸಹಕಾರ ಚಳುವಳಿ:** ಕ್ರಿ.ಶ. 1920ರಲ್ಲಿ ಗಾಂಧೀಜಿ ಅಸಹಕಾರ ಚಳುವಳಿಗೆ ಕರೆಕೊಟ್ಟರು. ಈ ಚಳುವಳಿಯ ಬಿಸಿ ವಿಜಯಪುರ ಜಿಲ್ಲೆಗೂ ಮುಟ್ಟಿತು. ನಾಗಠಾಣ, ಚಡಚಣ, ಗಲಗಲಿ, ಇಂಡಿ ಹಾಗೂ ಯಲಗೂರು ಗ್ರಾಮಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿದ್ದಲ್ಲದೇ ಪ್ರತಿ ಪಟ್ಟಣ ಹಾಗೂ ಹಳ್ಳಿಗಳಲ್ಲಿಯೂ ಚಳುವಳಿಗೆ ಜನ ಸ್ಪಂದಿಸಿದರು. ಶ್ರೀನಿವಾಸರಾವ್ ಕೌಜಲಗಿ, ಹನುಮಂತರಾವ್ ಕೌಜಲಗಿ, ಜಯರಾವ್ ದೇಶಪಾಂಡೆ, ನೀಲಕಂಠಪ್ಪ ಸುಗಂಧಿ, ಜನಾಬ್ ಜಾನ್ವೇಕರ ಹಾಗೂ ನಿಕ್ಕಂರು ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿ, ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡರು. ಯಂಗ್ ಇಂಡಿಯಾ ಮತ್ತು ಕೇಸರಿ ಪತ್ರಿಕೆಯಲ್ಲಿ ಪ್ರಕಟವಾದ ಸ್ವಾತಂತ್ರ್ಯ ಚಳುವಳಿಯ ವಿಷಯಗಳನ್ನು 'ಕರ್ನಾಟಕ ವೈಭವ' ಕನ್ನಡ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕಾಗಿ ಹನುಮಂತರಾವ್ ಮೊಹರೆ ಇವರನ್ನು ಬಂಧಿಸಲಾಯಿತು. ಚಳುವಳಿಯ ಸಂದರ್ಭದಲ್ಲಿ ಕಾರ್ಯಕರ್ತರಲ್ಲಿ ಶಿಸ್ತನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ 'ಹಿಂದೂಸ್ತಾನಿ ಸೇವಾದಳ' ಎಂಬ ಸ್ವಯಂ ಸೇವಕರ ದಳವನ್ನು ಸ್ಥಾಪಿಸಲಾಯಿತು. ಇವರ ಒಂದು ಶಾಖೆ ವಿಜಯಪುರ ಜಿಲ್ಲೆಯ ಕೃಷ್ಣಾನದಿ ದಂಡೆಯ ಸೀತಿಮನಿಯಲ್ಲಿ ಪ್ರಾರಂಭವಾಯಿತು.

ಕಂದಗಲ್ ಹನುಮಂತರಾಯರು ವಿಜಯಪುರದಲ್ಲಿ ಶ್ರೀಕೃಷ್ಣ ಹವ್ಯಾಸಿ ನಾಟಕ ತಂಡವನ್ನು ಸ್ಥಾಪಿಸಿ ಅದರ ಮೂಲಕ ಸಂಧ್ಯಾರಾಗ, ಎಚ್ಚಮ್ಮ ನಾಯಕ ಮುಂತಾದ ನಾಟಕಗಳನ್ನು ವಿಜಯಪುರದ ಅನೇಕ ಭಾಗಗಳಲ್ಲಿ ಪ್ರದರ್ಶಿಸುವುದರ ಮೂಲಕ ರಾಷ್ಟ್ರೀಯ ಚಳುವಳಿಗೆ ಪ್ರಚಾರ ಒದಗಿಸಿಕೊಟ್ಟರು.

ಲೋಕಮಾನ್ಯ ತಿಲಕ ಮತ್ತು ಗಾಂಧೀಜಿಯವರ ಸಂದೇಶಗಳನ್ನು 'ಧನುರ್ಧಾರಿ', 'ಖಾದಿವಿಜಯ' ಮತ್ತು 'ಉದಯ' ಎಂಬ ಪತ್ರಿಕೆಗಳು, ಪುಸ್ತಕ ಮತ್ತು ತಮ್ಮ ಭಾಷಣಗಳ ಮೂಲಕ ವಿಜಯಪುರ ಪರಿಸರದಲ್ಲಿ ಹರಡಿದ ಖ್ಯಾತಿ ದೇಶಭಕ್ತ ಹರ್ಡೇಕರ ಮಂಜಪ್ಪನವರಿಗೆ ಸಲ್ಲುತ್ತದೆ. ಅಲ್ಲದೇ ಇವರು ಒಂದು ಆಶ್ರಮವನ್ನು ಹಾಗೂ ಒಂದು ವಿದ್ಯಾಲಯವನ್ನು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಆಲಮಟ್ಟಿಯಲ್ಲಿ ಸ್ಥಾಪಿಸಿದರು. ಜಿಲ್ಲೆಯ ವಿವಿಧ ಭಾಗಗಳಲ್ಲಿ ಖಾದಿ

ಪ್ರಚಾರ ಮಾಡುತ್ತಾ, ರಾಷ್ಟ್ರೀಯ ಶಿಕ್ಷಣ ನೀಡುತ್ತಾ ಯುವಜನತೆಗೆ ತರಬೇತಿ ನೀಡುವ ಅನುಪಮ ಸೇವೆಗೈದರು. ಮುದ್ದೇಬಿಹಾಳ, ತಾಳಿಕೋಟೆ, ಸಿಂದಗಿ, ಮಸಬಿನಹಾಳ ಹಾಗೂ ಮಲಘಾಣಗಳಲ್ಲಿ ತರುಣ ರಾಟೀ ಸಂಘಗಳನ್ನು ಸ್ಥಾಪಿಸಿದರು. ಆದ್ದರಿಂದ ಇವರನ್ನು 'ಕರ್ನಾಟಕದ ಗಾಂಧಿ' ಎಂದೇ ಬಣ್ಣಿಸಲಾಗಿದೆ. ಕ್ರಿ.ಶ. 1927ರಿಂದ ಕ್ರಿ.ಶ. 1929ರ ಅವಧಿಯಲ್ಲಿ ಗಾಂಧೀಜಿ ಜೊತೆ ಸಾಬರಮತಿ ಆಶ್ರಮದಲ್ಲಿದ್ದು ತರಬೇತಿಗೊಂಡ ಕಾಕಾ ಕಾರನೀಸರು ಕ್ರಿ.ಶ. 1927ರಲ್ಲಿ ವಿಜಯಪುರಕ್ಕೆ ಹಿಂತಿರುಗಿ ಗಲಗಲಿಯಲ್ಲಿದ್ದ ಖಾದಿ ಉತ್ಪಾದನಾ ಕೇಂದ್ರದ ಹೊಣೆ ಹೊತ್ತುಕೊಂಡರು. ಅಸಹಕಾರ ಚಳುವಳಿಯ ಭಾಗವಾಗಿ ವಿಜಯಪುರ ಜಿಲ್ಲೆಯಲ್ಲಿ ಸಿಂದಗಿಡ (ಈಚಲುಗಿಡ)ಗಳ ನಾಶ, ವಿದೇಶಿ ವಸ್ತುಗಳ ವಿರುದ್ಧ ಪಿಕೇಟಿಂಗ್ ನಡೆದವು. ವಿಜಯಪುರ ತಾಲೂಕಿನ ನಾಗಠಾಣ, ಹೊಸೂರು, ಕಾಖಂಡಕಿ, ಬಬಲೇಶ್ವರ, ತೊರವಿ, ಕಾರಜೋಳ, ಅರ್ಜುಣಗಿ, ಬಾಗೇವಾಡಿ ತಾಲೂಕಿನ ಸಾತಿಹಾಳ, ಮನಗೂಳಿ, ಸಾಸನೂರ, ದೇಗಿನಾಳ, ಮುದ್ದೇಬಿಹಾಳ ತಾಲೂಕಿನ ತಾಳಿಕೋಟೆ, ಸಿಂದಗಿ ತಾಲೂಕಿನ ದೇವರ ಹಿಪ್ಪರಗಿ, ಪಡಗಾನೂರ, ಇಂಡಿ ತಾಲೂಕಿನ ಚಡಚಣ, ಹಲಸಂಗಿ ಮತ್ತು ನಿಂಬರಗಿಗಳಲ್ಲಿ ಅರಣ್ಯ ಸತ್ಯಾಗ್ರಹ ನಡೆಯಿತು.

**ಕಾನೂನುಭಂಗ ಚಳುವಳಿ:** ವಿಜಯಪುರ ಪರಿಸರದಲ್ಲಿ ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಿದ ಬಾಬುರಾವ್, ಡಾ. ಹುಲ್ಯಾಳಕರ, ವಾಮನರಾವ್ ದೇಶಪಾಂಡೆ ಇವರನ್ನು ಬಂಧಿಸಲಾಯಿತು. ಸಂಗಯ್ಯ ವಾಟನಾಳ ಇವರು ಸ್ವಾತಂತ್ರ್ಯ ಚಳುವಳಿಯ ಸಂಕೇತವಾಗಿ ನಾಗಠಾಣ ಗ್ರಾಮದ ಮಹಿಳೆ ಮತ್ತು ಮಕ್ಕಳಿಗಾಗಿ ಚರಕವನ್ನು ನೀಡಿ ನೂಲುವುದನ್ನು ಕಲಿಸಿದರು. ಜಮಖಂಡಿ, ಮುಧೋಳ, ಮಹಾಲಿಂಗಪೂರ ಒಳಗೊಂಡಂತೆ ವಿಜಯಪುರದ ಹಲವಾರು ಭಾಗಗಳಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಾ ಪ್ರಭಾತಪೇರಿಯನ್ನು ಮಾಡಿದರು.

ಕಾನೂನುಭಂಗ ಚಳುವಳಿಯ ಭಾಗವಾಗಿ ಗಾಂಧೀಜಿಯವರ ನೇತೃತ್ವದಲ್ಲಿ ಜರುಗಿದ ಉಪ್ಪಿನ ಸತ್ಯಾಗ್ರಹ ವಿಜಯಪುರ ಜಿಲ್ಲೆಯಲ್ಲಿ ಕೂಡಾ ಪ್ರತಿಧ್ವನಿಸಿತು. ಆರ್. ಆರ್. ದಿವಾಕರ ಅವರ ನಾಯಕತ್ವದಲ್ಲಿ 25–30 ಜನ ಯುವಕರು ಹೊನಗನಹಳ್ಳಿಯ ಹತ್ತಿರದ ದೋಣಿನದಿಗೆ ಹೋಗಿ ಉಪ್ಪನ್ನು ತಯಾರಿಸುವುದರ ಮೂಲಕ ಗಾಂಧೀಜಿಯ ಕರೆಯನ್ನು ಬೆಂಬಲಿಸಿದರು. ಈ ಚಳುವಳಿಯಲ್ಲಿ ಕೌಜಲಗಿಯವರು, ಮೊಹರೆಯವರು ಮತ್ತು ಕಾಕಾ ಕಾರನೀಸರು ಜೈಲು ಶಿಕ್ಷೆಯನ್ನು ಅನುಭವಿಸಿದರು. ಕ್ರಿ.ಶ. 1930 ಏಪ್ರಿಲ್ 6 ರಿಂದ 1931 ಮಾರ್ಚ್ 5ರ ವರೆಗೆ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ವಿಜಯಪುರ ಜಿಲ್ಲೆಯಿಂದ ಒಟ್ಟು 158 ಜನ ಜೈಲು ಸೇರಿದರು.

**ಭಾರತ ಬಿಟ್ಟು ತೊಲಗಿ ಚಳುವಳಿ**

ವಿಜಯಪುರ ಜಿಲ್ಲೆಯ ಐದೂ ತಾಲೂಕುಗಳಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯು ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಚಳುವಳಿಯ ಜಿಲ್ಲೆಯ ಪ್ರಮುಖ ನಾಯಕರೆಂದರೆ, ಅರ್ಜುಣಗಿಯ ಚನ್ನಬಸಪ್ಪ ಅಂಬಲಿಯವರು

ಇವರು ಕೆ.ಪಿ.ಸಿ.ಸಿ. ನೇಮಿಸಿದ್ದ ಚಲೇಜಾವ್ ಸಮಿತಿಯ ಅಧ್ಯಕ್ಷರಾಗಿದ್ದರು. ಇವರ ಜೊತೆಗೆ ಅಡಿವೆಪ್ಪ ಕರಮರಕರ ಮುರಿಗೆಪ್ಪ ಸುಗಂಧಿ, ರಾಜಾರಾಮ ದುಬೆ ಹಾಗೂ ದಿವಾಕರರು ಹಲವಾರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿ ಜುಮನಾಳ, ಮಿಂಚನಾಳ ರೈಲು ನಿಲ್ದಾಣಗಳನ್ನು ತಾವೇ ಖುದ್ದಾಗಿ ಸುಟ್ಟು ಹಾಕಿದರು. ಚನ್ನಬಸಪ್ಪ ಅಂಬಲಿ, ಮಾಳವಾಡ ಸಿದ್ದಪ್ಪ, ಜಂಗಿನ ಲಿಂಗಯ್ಯ, ತಮಾಜಿ ಮಿರಜಕರ ಇವರೆಲ್ಲರೂ ಸರ್ಕಾರಿ ದಾಖಲೆಗಳನ್ನು ಸುಟ್ಟು ಹಾಕಿದರು. ಅದೇ ರೀತಿ ಈ ಭಾಗದಲ್ಲಿ ಹಲವಾರು ರೈಲು ನಿಲ್ದಾಣಗಳು, ಅಂಚೆ ಕಛೇರಿಗಳು, ಟೆಲಿಫೋನ್ ಲೈನ್‌ಗಳು, ಪೊಲೀಸ್ ಸ್ಟೇಷನ್‌ಗಳು ಬೆಂಕಿಗೆ ಆಹುತಿಯಾದವು. ಈ ಜಿಲ್ಲೆಯಿಂದ ಸುಮಾರು 250 ಕಾರ್ಯಕರ್ತರು ಬಂಧನಕ್ಕೊಳಗಾದರು. ಅವರಲ್ಲಿ ಆರ್. ಆರ್. ದಿವಾಕರ, ಆರ್. ಎಸ್. ಹುಕ್ಕೇರಿಕರ್, ಡಿ.ಪಿ. ಕರಮರಕರ, ವೀರಭದ್ರಗೌಡ ಪಾಟೀಲ, ಚನ್ನಬಸಪ್ಪ ಅಂಬಲಿ, ಬಿಂದುಮಾಧವ ಬುರ್ಲಿ, ಶಂಕರ ಕುರ್ತುಕೋಟಿ, ವೆಂಕಟೇಶ ಮಾಗಡಿ, ನರಸಿಂಹ ದಾಬಡೆ, ದುಂಡಪ್ಪ ಹುನಶ್ಯಾಳ, ಹನುಮಂತಪ್ಪ ಕಟ್ನಾಳ್ಳಿ, ಲಚ್ಚಪ್ಪ ಗೊರನಾಳ, ನಾರಾಯಣ ಕುಲಕರ್ಣಿ ಮುಂತಾದವರು.

**ಮಹಿಳೆಯರ ಪಾತ್ರ**

ವಿಜಯಪುರ ಜಿಲ್ಲೆಯಲ್ಲಿಯೂ ಮಹಿಳಾ ನಾಯಕಿಯರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ದಾಖಲೆಗಳು ಸಿಗುತ್ತವೆ. ವಿಜಯಪುರ ತಾಲೂಕಿನ ಜೈನಾಪುರ ಗ್ರಾಮದ ಕಾಶೀಬಾಯಿ ಸಂಗಪ್ಪ ದೇಸಾಯಿ ಎಂಬ ಹೆಸರಿನ ಮಹಿಳೆ ಬ್ರಿಟಿಷ್ ಅಧಿಕಾರಿಯ ಆದೇಶವನ್ನು ಧಿಕ್ಕರಿಸಿದ ಸಂಗತಿ ದಾಖಲೆಗಳಿಂದ ತಿಳಿದುಬರುತ್ತದೆ. ಅಂಬಲಿ ಚನ್ನಬಸಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗೂಬಾಯಿ ಅಂಬಲಿಯವರೂ ಪ್ರಮುಖರು. ಅದರಂತೆ ಸೀತಾಬಾಯಿ ಬಳವಳ್ಳಿ, ವೆಂಕೋಬಾಯಿ, ಪರ್ವತಿ, ಲಕ್ಷ್ಮೀಬಾಯಿ ಪದಕಿ, ಇಂದಿರಾಬಾಯಿ ಕಟ್ಟಿ, ರಮಾಬಾಯಿ ನರಸಾಪೂರ ಮೊದಲಾದ ಮಹಿಳೆಯರು ಜಿಲ್ಲೆಯಲ್ಲಿ ಮುಂಜಾವಿನ ಸಮಯದಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ರಾಷ್ಟ್ರಗೀತೆಯನ್ನು ಹಾಡುತ್ತಾ ಗ್ರಾಮಗಳಲ್ಲಿ ಸಂಚರಿಸಿ ರಾಷ್ಟ್ರಪ್ರೇಮವನ್ನು ಪ್ರದರ್ಶಿಸಿದ್ದಾರೆ. ಇಂಡಿ ತಾಲೂಕಿನ ಚಡಚಣ ಗ್ರಾಮವು ಮಹಿಳಾ ಹೋರಾಟಗಾರರ ಪ್ರಮುಖ ನೆಲೆಯಾಗಿತ್ತು.

ಹೀಗೆ ಭಾರತದ ಸ್ವಾತಂತ್ರ್ಯ ಚಳುವಳಿಯುದ್ದಕ್ಕೂ ವಿಜಯಪುರ ಜಿಲ್ಲೆಯ ಜನರು ವಿವಿಧ ಹಂತದ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವ ತಮ್ಮ ಧ್ಯೇಯಕ್ಕೆ ಅಚಲರಾಗಿದ್ದುಕೊಂಡು ತಮ್ಮ ಜೀವನವನ್ನು ತ್ಯಾಗ ಮಾಡಿ ಅಗಸ್ಟ್ 15, 1947ರಂದು ಸ್ವಾತಂತ್ರ್ಯ ತಂದುಕೊಟ್ಟು ಅಜರಾಮರರಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. Krishna Rao M. V., and Halappa G. S. (Ed); 1962, History of Freedom Movement in Karnataka, Vol–I, Bangalore Government of Mysore.
2. ಕಾಮತ್ ಸೂರ್ಯನಾಥ (ಸಂ.) 1974; ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, Vol–I, , ಗೀತಾ ಬುಕ್ ಹೌಸ್, ಮೈಸೂರು.
3. ದೊರೆಸ್ವಾಮಿ, ಎಚ್. ಎಸ್. 1977; ಸ್ವಾತಂತ್ರ್ಯ ಸಂಗ್ರಾಮ; ಕರ್ನಾಟಕ, ಸಾಹಿತ್ಯ ಮಂದಿರ ಬೆಂಗಳೂರು.
4. ಶರ್ಮಾ, ತಿ. ತಾ : ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮ 1800–1857 ಬೆಂಗಳೂರು, ಮೈಸೂರು ಸಂಸ್ಥಾನ ಸರ್ಕಾರ.
5. ಸುಂದರ ರಾಜ್ ಎಚ್. ಆರ್., 1987; 'ಚಲೇಜಾವ ಚಳುವಳಿಯಲ್ಲಿ ಕರ್ನಾಟಕದ ಪಾತ್ರ' ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಹುಬ್ಬಳ್ಳಿ.
6. Halappa G. S. (Ed), 1964; History of Freedom Movement in Karnataka Vol. II, Gov–ernment of Mysore, Bangalore.
7. Sathyan B. N., 1966, Mysore State Gazetteer : Bijapur District, Government Press, Bangalore.
8. Shrinivas Murthy H.V., and Ramakrishna, R., 1970 ; History of Karnataka (from the earliest times to the present day, New Delhi.
9. Umapati K., 1992, Role of Bijapur District, Karnataka in the Indian Freedom Struggle, Department of Political Science, Unpublished Thesis Submitted to Karnatak Universi–ty, Dharwad.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.